**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 399/2022**

**ಪಿರ್ಯಾದಿದಾರರುಃ** ರಾಜ್ಯದ ಪರವಾಗಿ

ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತ/ರುಃ** **ಕೆ.ಎಸ್ ಪುನೀತ್** ಬಿನ್ ಶಿವಣ್ಣ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಃ 1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 2.** ಪ್ರಾಸಾ.1 ರೂಪ ವಿ.ಕೆ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 23.11.2021 ರಂದು ತಾನು, ಚಾಸಾ.4 ಮತ್ತು 5 ಮತ್ತು ತಮ್ಮ ಸಿಬ್ಬಂದಿಯಾದ ಜೀವನ್ ರವರೊಂದಿಗೆ ಚನ್ನರಾಯಪಟ್ಟಣ ಹೊರವಲಯದ ಮೈಸೂರು ರಸ್ತೆಯಲ್ಲಿ ಮಧ್ಯಾಹ್ನ 2.00 ಗಂಟೆಯಲ್ಲಿ ರಸ್ತೆಗಾವಲು ನಡೆಸಿ, ವಾಹನಗಳನ್ನು ಪರಿಶೀಲಿಸುತ್ತಿದ್ದಾಗ ಮೈಸೂರು ಕಡೆಯಿಂದ ಒಬ್ಬ ವ್ಯಕ್ತಿಯು ಕೆಎ.1.ಇ ಆರ್.9984 ಹೊಂಡಾ ಡಿಯೋ ದ್ವಿ ಚಕ್ರ ವಾಹನವನ್ನು ಚನ್ನರಾಯಪಟ್ಟಣ ಕಡೆಗೆ ಓಡಿಸಿಕೊಂಡು ಬರುತ್ತಿದ್ದು, ಅದನ್ನು ತಾವು ತಡೆದು ನಿಲ್ಲಿಸಿ, ಆತನ ಹೆಸರನ್ನು ಕೇಳಲಾಗಿ ಆತನ ಹೆಸರು ಪುನೀತಕುಮಾರ್ ಬಿನ್ ಶಿವಣ್ಣ, ಕಾಮಸಮುದ್ರ ಗ್ರಾಮ, ಹಳೆಕೋಟೇ ಹೋಬಳಿ, ಹೊಳೆನರಸೀಪುರ ತಾಲ್ಲೂಕು ಎಂದು ತಿಳಿಸಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 3.** ಪ್ರಾಸಾ.1 ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ವಾಹನವನ್ನು ಶೋಧಿಸಬೇಕೆಂದು ತಿಳಿಸಿ, ಡಿಕ್ಕಿಯನ್ನು ತೆಗೆದು ನೋಡಲಾಗಿ, ವಾಹನದ ಡಿಕ್ಕಿಯಲ್ಲಿ ಗಾಟು ವಾಸನೆಯಿಂದ ಕೂಡಿದ ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ದೊರಕಿದ್ದು, ಅದು ಅನುಮಾನಸ್ಪದವಾಗಿ ಕಂಡು ಬಂದ ಕಾರಣ, ಅದಕ್ಕೆ ಪಂಚರ

ಅವಶ್ಯಕತೆ ಇದೆ ಎಂದು ಮನಗಂಡು, ಸದರಿ ಸ್ಥಳದ ಪಕ್ಕದಲ್ಲಿದ್ದ ಗ್ರೀನ್ ಟೀ ಡಾಬಾದಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು, ಅವರಿಗೆ ವಿಚಾರ ತಿಳಿಸಿ, ಪಂಚರಾಗಿ ಸಹಕರಿಸುವಂತೆ ಕೋರಲಾಗಿ ಅವರು ಒಪ್ಪಿಕೊಂಡಿದ್ದು, ನಂತರ ಸ್ಥಳದಲ್ಲಿಯೇ ಶೋಧನಾ ಸಮುಚಾಯ ಆಧಾರವನ್ನು ತಯಾರಿಸಿ, ನಂತರ ಪಂಚರ ಸಮಕ್ಷಮ ವಾಹನ ಚಾಲಕನ ಸಮಕ್ಷಮ ಸದರಿ ಪ್ಲಾಸ್ಟಿಕ್ ಕವರನ್ನು ತೆಗೆದು ನೋಡಲಾಗಿ, ಅದರಲ್ಲಿ ಗಾಟು ವಾಸನೆಯಿಂದ ಕೂಡಿದ ಒಣ ಗಾಂಜಾ ಕಂಡು ಬಂದಿರುತ್ತದೆ, ಆ ಬಗ್ಗೆ ಆತನನ್ನು ಪ್ರಶ್ನೆ ಮಾಡಲಾಗಿ ಅದನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ, ನಂತರ ತಮ್ಮ ವಾಹನದಲ್ಲಿದ್ದ ತೂಕದ ಯಂತ್ರದ ಸಹಾಯದಿಂದ ಸದರಿ ಒಣ ಗಾಂಜಾವನ್ನು ತೂಕ ಮಾಡಿ ನೋಡಲಾಗಿ ಅದು ಸುಮಾರುವಾ 325 ಗ್ರಾಂ ತೂಕವಿರುವುದು ಕಂಡು ಬಂದಿರುತ್ತದೆ, ನಂತರ ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ದಾರದಲ್ಲಿ ಕಟ್ಟಿ ಹರಗಿನಿಂದ ಇಲಾಖಾ ಮೊಹರು ಮಾಡಿ, ನಂತರ ಆತನಿಗೆ ಅಪರಾಧ ಬಗ್ಗೆ ಮನವರಿಕೆ ಮಾಡಿಕೊಟ್ಟು, ನಂತರ ಸದರಿ ಗಾಂಜಾ ಮತ್ತು ಸದರಿ ದ್ವಿಚಕ್ರ ವಾಹನವನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 4.** ಪ್ರಾಸಾ.2 ವೆಂಕಟೇಶ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, 2021 ರಲ್ಲಿ ತಾನು ಮತ್ತು ಚಾಸಾ.3 ರವರು ಬಿ.ಎಂ. ರಸ್ತೆಯಲ್ಲಿರುವ ಗ್ರೀನ್ ಟ್ರೀ ಡಾಬಾದಲ್ಲಿ ಊಟ ಮಾಡುತ್ತಾ ಕುಳಿತಿದ್ದಾಗ, ಒಬ್ಬ ಮಹಿಳಾ ಅಬಕಾರಿ ಪೋಲೀಸರು ಅಲ್ಲಿಗೆ ಬಂದು ಗಾಂಜಾದ ಬಗ್ಗೆ ಮಾಹಿತಿ ಬಂದಿದ್ದು, ಚೆಕ್ ಮಾಡಬೇಕು ನೀವು ಜೊತೆಗೆ ಬನ್ನಿ ಎಂದು ತಮಗೆ ನೋಟೀಸು ನೀಡಿರುತ್ತಾರೆ, ಅದರಂತೆ ಅವರು ಆರೋಪಿಯ ಬೈಕಿನ ಡಿಕ್ಕಿಯಲ್ಲಿದ್ದ 325 ಗ್ರಾಂ ಗಾಂಜಾವನ್ನು ಸೀಜ್ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 5.** ಪ್ರಾಸಾ.3 ಅಭಿಲಾಶ್ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 23.11.2021 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಮೈಸೂರು ರಸ್ತೆಯ ಗ್ರೀನ್

ಟೀ ಡಾಬಾ ಪಕ್ಕದಲ್ಲಿ ತಾನು, ಚಾಸಾ.1, ಚಾಸಾ.4 ರವರು ರಸ್ತೆ ಗಾವಲುನಲ್ಲಿದ್ದಾಗ ಮೈಸೂರ ಕಡೆಯಿಂದ ದ್ವಿ ಚಕ್ರ ವಾಹನ ಕೆಎ.13.ಇ.ಆರ್ 9984 ನ್ನು ತಡೆದು ನಿಲ್ಲಿಸಿ ಸದರಿ ವಾಹನವನ್ನು ಶೋಧನೆ ಮಾಡಲು ಪಂಚರ ಅವಶ್ಯಕತೆ ಇದ್ದುದ್ದರಿಂದ ಚಾಸಾ.1 ರವರು ಚಾಸಾ.2 ಮತ್ತು 3 ರವರನ್ನು ಕರೆದು ವಿಷಯ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು, ಅವರು ಒಪ್ಪಿರುತ್ತಾರೆ, ನಂತರ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ಆದಾರವನ್ನು ಚಾಸಾ.1 ರವರು ತಯಾರಿಸಿಕೊಂಡು, ನಂತರ ತಾವು ಪರಸ್ಪರ ಅಂಗಶೋಧನೆ ಮಾಡಿಕೊಂಡು, ಸದರಿ ವಾಹನವನ್ನು ಪರಿಶೀಲಿಸಿದಾಗ ವಾಹನದ ಡಿಕ್ಕಿಯಲ್ಲಿ ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ಕಂಡುಬಂದಿದ್ದು ಅದನ್ನು ಪರಿಶೀಲಿಸಲಾಗಿ ಅರದಲ್ಲಿ ಒಣಗಿದ ಗಾಂಜಾ ಮಾದರಿಯ ಸೊಪ್ಪು ಇರುವುದು ಕಂಡುಬಂದಿರುತ್ತದೆ, ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 6.** ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ವಾಹನ ಸವಾರರನ್ನು ಚಾಸಾ.1 ರವರು ವಿಚಾರಿಸಿದಾಗ ಅವರ ಹೆಸರು ಪುನೀತ್ ಹೋಳೆನರಸೀಪುರ ಎಂದು ಉತ್ತರಿಸಿದ್ದು ಸದರಿ ಸೊಪ್ಪು ಗಾಂಜಾ ಎಂದು ಒಪ್ಪಿರುತ್ತಾರೆ, ಸ್ದಳದಲ್ಲಿ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು, ಅವನ ಬಳಿ ಇದ್ದ ಸೊಪ್ಪನ್ನು ತಮ್ಮ ಬಳಿ ಇದ್ದ ತೂಕದ ಯಂತ್ರದ ಸಹಾಯದಿಂದ ತೂಕ ಮಾಡಲಾಗಿ ಅದರ ತೂಕ 325 ಗ್ರಾಂ ಒಣ ಗಾಂಜಾ ಇರುವುದು ಕಂಡುಬಂದಿರುತ್ತದೆ, ನಂತರ ಸದರಿ ಗಾಂಜಾವನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ದಾರದಲ್ಲಿ ಕಟ್ಟಿ ಅರಗಿನಿಂದ ಇಲಾಖಾ ಸೀಲನ್ನು ಮಾಡಿ, ಸ್ದಳದಲ್ಲಿಯೇ ಚಾಸಾ.1 ರವರು ಮಹಜರ್ ಕ್ರಮ ಕೈಗೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ ಃ 5.** ಪ್ರಾಸಾ.5 ಅನಿತಾ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕ 08.12.2021 ರಂದುಕೃತ್ಯಕ್ಕೆ ಬಳಸಿದ ವಾಹನದ ಬಿ ವಹಿಯನ್ನು ಪಡೆದಿದ್ದು, ಆರೋಪಿ ಸದರಿ ವಾಹನದ ಮಾಲೀಕರು ಎಂದು ಕಂಡುಬಂದಿದ್ದು, ನಂತರ ಕೇಂದ್ರ ರಾಸಾಯನಿಕ ಪ್ರಯೋಗಾಲಯ ಬೆಂಗಳೂರು ರವರಿಂದ ರಾಸಾಯನಿಕ ವರದಿಯನ್ನು ನಂತರ

ಆರೋಪಿಯ ವಿರುದ್ಧ ಆರೋಪ ಸಾಭೀತಾಗಿದ್ದು ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಆರೋಪಿಯ ಉತ್ತರ :**

**ಪ್ರಶ್ನೆ : 7 :** ನೀವು ಏನಾದರೂ ಹೇಳಲು ಬಯಸುತ್ತೀರಾ ?

**ಆರೋಪಿಯ ಉತ್ತರ :**

**ಪ್ರಶ್ನೆ : 8 :** ನಿಮ್ಮ ಪ್ರತಿರಕ್ಷಣೆಗೆ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

**ಆರೋಪಿಯ ಉತ್ತರ :**

(ಮೇಲೆ ತಿಳಿಸಿದ ಎಲ್ಲಾ ವಿವರಗಳನ್ನು ಓದಿ, ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರಗಳನ್ನು ಸ್ವತಃ ನನ್ನ ಕೈ ಬರಹದಲ್ಲಿ ಬರೆದು ದೃಢೀಕರಿಸಿರುತ್ತೇನೆ.)

ದಿನಾಂಕಃ **04.03.2026**

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.